# 32

# “ಸಾಮ್ಯರೂಪವಾಗಿ ಅನೇಕ ಸಂಗತಿಗಳನ್ನು ಮಾತಾಡಿದನು”

## ಓದುವ ಮನೆಪಾಠ #12

V. ಎರಡನೇ ಪಸ್ಕದಿಂದ ಮೂರನೆಯದಕ್ಕೆ (ಮುಂದುವರೆಯುವದು).

O. ಸಾಮ್ಯಗಳ ಒಂದು ದೊಡ್ಡ ಸಮೂಹ.[1]

1. ಸಂದರ್ಭ ಹಾಗೂ ಕ್ರಿಯೆ (ಮತ್ತಾಯ 13:1-3; ಮಾರ್ಕ 4:1, 2; ಲೂಕ 8:4).
2. ಬಿತ್ತುವವನ ಸಾಮ್ಯ - ಅದರ ವಿವರ (ಮತ್ತಾಯ 13:3-23; ಮಾರ್ಕ 4:3-25; ಲೂಕ 8:5-18).
3. ರಹಸ್ಯ ಬೆಳವಣಿಗೆಯ ಸಾಮ್ಯ (ಮಾರ್ಕ 4:26-29).
4. ಹಣಜಿಯ ಸಾಮ್ಯ (ಮತ್ತಾಯ 13:24-30).
5. ಸಾಸಿವೆ ಕಾಳು ಹಾಗೂ ಹುಳಿಯ ಸಾಮ್ಯ (ಮತ್ತಾಯ 13:31-35; ಮಾರ್ಕ 4:30-34).
6. ಹಣಜಿಯ ಸಾಮ್ಯದ ವಿವರಣೆ (ಮತ್ತಾಯ 13:36-43).
7. ದ್ರವ್ಯ ಹಾಗೂ ಮುತ್ತಿನ ಸಾಮ್ಯ (ಮತ್ತಾಯ 13:44-46).
8. ಭಲೆಯ ಸಾಮ್ಯ (ಮತ್ತಾಯ 13:47-53).

**ಪರಿಚಯ**

ಒಂದು “ಕಾರ್ಯನಿರತವಾದ ದಿವಸ” ಎಂಬುದನ್ನು ಹಿಂದಿನ ಪಾಠದಲ್ಲಿ ವಿಶ್ಲೇಷಣೆ ಮಾಡಿದ್ದೇವೆ. ಸೈತಾನನ ಸಹಾಯದಿಂದ ಯೇಸು ದೆವ್ವಗಳನ್ನು ಬಿಡಿಸುತ್ತಿದ್ದನು ಎಂಬುದು ಫರಿಸಾಯರ ತರ್ಕವಾಗಿತ್ತು. ಈ ತರ್ಕದ ನಿಮಿತ್ತವಾಗಿ ಯೇಸುವಿನ ಸೇವೆಯಲ್ಲಿ ಒಂದು ಬದಲಾವಣೆ ಉಂಟಾಯಿತು. ಯೇಸುವಿನ ಪ್ರಸಂಗದ ವಿಧವನ್ನು ಬದಲಾಯಿಸಿದ್ದು ಒಂದು ಅಂಶ. ಆತನ ಬೋಧನೆಗಳೆಲ್ಲವೂ ಸಾಮ್ಯರೂಪವಾಗಿತ್ತು (ಮತ್ತಾಯ 13:34, 35; ಮಾರ್ಕ 4:33, 34). ನಂತರ ಕ್ರಿಸ್ತನು ತನ್ನ ಸೇವೆಯನ್ನು ಸಮುದ್ರದ ಆಚೆಗೂ ಕೊಂಡೊಯ್ದನು (ಮಾರ್ಕ 4:33, 35). ಸಮುದ್ರ ಪ್ರಯಾಣದ ಕುರಿತು ಮುಂದಿನ ಪಾಠದಲ್ಲಿ ಗಮನಿಸೋಣ. ಈ ಪಾಠದಲ್ಲಿ ಆತನು ತಿಳಿಸಿದ “ಪ್ರಮುಖ ಸಾಮ್ಯಗಳ ಪ್ರಥಮ ಗುಂಪಿನ” ಬಗ್ಗೆ ಗಮನಿಸೋಣ.[2]

ಯೇಸುವಿನ ತಾಯಿ ಹಾಗೂ ಸಹೋದರರು ಆತನನ್ನು ಸಂಧಿಸಿದ ಚಿತ್ರಣದೊಂದಿಗೆ ಕಳೆದ ಪಾಠವು ಅಂತ್ಯಗೊಂಡಿತ್ತು (ಮತ್ತಾಯ 12:46-50). ತದ ನಂತರ ಯೇಸು ಬೋಧಿಸಲು ಪ್ರಿಯವಾಗಿದ್ದ ಸಮುದ್ರ ದಂಡೆಗೆ ಆತನು ಹೋದನು (ಮತ್ತಾಯ 13:1; ಮಾರ್ಕ 4:1). ಯಥಾಪ್ರಕಾರ ಜನರು ಆತನ ಬೋಧನೆಯನ್ನು ಕೇಳಲು ಕೂಡಿಬಂದರು (ಲೂಕ 8:4) ಜನರು ಸಮುದ್ರ ದಂಡೆಯಲ್ಲಿರಲು, ಯೇಸು ದೋಣಿಯ ಮೇಲೆ ನಿಂತು ಪ್ರಸಂಗಿಸಿದನು (ಮತ್ತಾಯ 13:2; ಮಾರ್ಕ 4:1).

ಪರಿಸ್ಥಿತಿಯು ಒಂದೇ ಆಗಿದ್ದರೂ, ಆತನ ಪ್ರಸಂಗದಲ್ಲಿ ಬದಲಾವಣೆಯಾಗಿತ್ತು; ಅವುಗಳು

ಸಂಕ್ಷಿಪ್ತವಾಗಿದ್ದವು. "ಆಗ ಆತನು ಅವರೊಂದಿಗೆ ಸಾಮ್ಯರೂಪವಾಗಿ ಮಾತನಾಡಿದನು" (ಮತ್ತಾಯ 13:3ಎ; ನೋಡಿ ಮಾರ್ಕ 4:2ಎ).

ಈ ಹಿಂದೆಯೂ ಯೇಸು ಸಾಮ್ಯಗಳನ್ನು ಬಳಸಿದ್ದನು. ಲೂಕನು ತಿಳಸಿರುವ ಪರ್ವತ ಪ್ರಸಂಗದಲ್ಲಿ ಕುರುಡನು ಕುರುಡನನ್ನು ನಡೆಸುವ ಬಗ್ಗೆ ಕ್ರಿಸ್ತನು "ಸಾಮ್ಯರೂಪದಲ್ಲಿ ಮಾತಾಡಿದ್ದನು" (ಲೂಕ 6:39). ಸಿಮೋನನ ಮನೆಯಲ್ಲಿ ಊಟ ಮಾಡುವಾಗ "ಇಬ್ಬರು ಸಾಲಗಾರರ" ಕುರಿತ ಸಾಮ್ಯವನ್ನು ಹೇಳಿದನು (ಲೂಕ 7:41, 42).[3] ಏಳು ದೆವ್ವಗಳ ದೃಷ್ಟಾಂತವನ್ನು ಸಹ ಕೆಲವರು ಸಾಮ್ಯಗಳ ಸಾಲಿಗೆ ಸೇರಿಸಿರುವರು (ಲೂಕ 11:24-26).[4] ಸಾಮ್ಯಗಳನ್ನು ಯಥೇಚ್ಛವಾಗಿ ಬಳಸಿದರ ಕಾರಣವೇನು, ಅದರ ಕುರಿತು ಮತ್ತಾಯ, "ಯೇಸು ಈ ಮಾತುಗಳನ್ನೆಲ್ಲಾ, ಜನರ ಗುಂಪುಗಳಿಗೆ ಸಾಮ್ಯರೂಪವಾಗಿ ಹೇಳಿದನು; ಸಾಮ್ಯವಿಲ್ಲದೆ ಒಂದನ್ನು ಹೇಳಿಲಿಲ್ಲ"[5] (ಮತ್ತಾಯ 13:34; ನೋಡಿ ಮಾರ್ಕ 4:33, 34). ತನ್ನ ಬೋಧನೆಗೆ ಸಾಮ್ಯಗಳು ಸಹಾಯಕವಾಗುವ ಬದಲು, ಸಾಮ್ಯಗಳು ಆತನ ಬೋಧನೆಗೆ ಸಾಧನಗಳಾ ದವು.

ಯೇಸುವಿನ ಮುಂದಿನ ಸೇವೆಯಲ್ಲಿ ಸಾಮ್ಯಗಳು ಪ್ರಮುಖವಾದದ್ದರಿಂದ, ಅಂತಹ ಸಾಮ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಬೇಕಿದೆ. "ಕಾರ್ಯನಿರತ ದಿನ" ಎಂಬುದರಲ್ಲಿ, ಕ್ರಿಸ್ತನು ತಿಳಿಸಿದ ಹತ್ತಕ್ಕಿಂತ ಹೆಚ್ಚಾದ ಸಾಮ್ಯಗಳನ್ನು ಪರಿಶೀಲಿಸೋಣ.

## ಸಾಮ್ಯಗಳು: ವಿವರಣೆ
## (ಮತ್ತಾಯ 13:10-17; ಮಾರ್ಕ 4:10-13, 21-25; ಲೂಕ 8:9, 10, 16-18)

ಸಾಮ್ಯಗಳು ಯೇಸುವಿಗೆ ಮಾತ್ರ ಸೀಮಿತವಾಗಿರಲಿಲ್ಲ. ಹಳೆ ಒಡಂಬಡಿಕೆಯ ಪ್ರಸಂಗಿಗಳು ಸಹ ಇದನ್ನು ಪಾರಂತಗತ ಮಾಡಿಕೊಂಡಿದ್ದರು (ಕೀರ್ತನೆ 78:2;[6] ಯೆಹೆಜ್ಕೇಲನು 17:2; 20:49; 24:3; ಹೊಶೆಯ 12:10). ಆದರೆ, "ಯೇಸು ಮಾತ್ರ ಸಾಮ್ಯಗಳನ್ನು ವಿವರಿಸುವಲ್ಲಿ ಅತಿ ಅನುಭವಿಯಾಗಿದ್ದನು."[7] ಸಾಮ್ಯಗಳ ಬೋಧನೆಗಳಲ್ಲಿ ಆತನು ಯಾರು ಎಂಬ ಅಂಶವು ಗಮನಾರ್ಹವಾಗಿದೆ.

F. ಲಗಾರ್ಡ್ ಸ್ಮಿಥ್‌ರವರು ಬರೆದು, "ಮಹಾ ಬೋಧಕನಾದ ಯೇಸು ಬೋಧನೆಗಳಲ್ಲಿ ವಿವಿಧ ಕ್ರಮಗಳನ್ನು ಬಳಕೆ ಮಾಡುತ್ತಿದ್ದನು ..." ಆತನ ಎಲ್ಲಾ ಕ್ರಮಗಳಲ್ಲಿ, ಸಾಮ್ಯಗಳ ಬೋಧನ ಕ್ರಮ, ಬಹು ಆಸಕ್ತಿವುಳ್ಳದ್ದಾಗಿದೆ.[8] H. I. ಹೆಸ್ಟರ್ ಪ್ರಕಾರ, "ಯೇಸು ತಿಳಿಸಿದ ಸಾಮ್ಯಗಳಲ್ಲಿ ಸಾಹಿತ್ಯದ ಸೌಂದರ್ಯವು ಅಡಗಿದೆ: 'ಅದು ಸುಂದರವಾದ ಸಾಹಿತ್ಯದ ಕಲೆಯಾಗಿದೆ. ಅವುಗಳು ಸರಳತೆ, ಪ್ರಬುದ್ಧತೆ, ಪ್ರಾಥಮಿಕ, ಮಿಮಾಂಸೆ ಹಾಗೂ ಆತ್ಮೀಕ ಗುಣಿಗಳನ್ನು ಹೊಂದಿರುತ್ತವೆ'"[9].

### ಸಾಮ್ಯಗಳು: ಏನು?

"ಸಾಮ್ಯ" "parable" ಎಂಬುದು ಗ್ರೀಕ್ ಭಾಷೆಯ (*parabole*) ಜೋಡಿಪದವಾಗಿದೆ. "ಜೊತೆಯಲ್ಲಿ" (*para*) ಎಂಬ ನಾಮ ಪದದ "ಎಸೆ" (*ballo*) ಎಂಬ ಅರ್ಥ "ಜೊತೆಯಲ್ಲಿ ಎಸೆ" ಎಂಬ ಅಕ್ಷರಶ ಅರ್ಥ. "ಸಮಾನ" ಎಂಬ ಪದಕ್ಕೆ ಸಮಾನವಾಗಿದೆ, "ಒಟ್ಟಾಗಿ ಇರುವ ಎರಡು ಗೆರೆಗಳು" ಎಂಬ ಅರ್ಥ:

ಸಾಮ್ಯದಲ್ಲಿ ಹೇಳಿರುವ ಕಥೆ ಅಥವಾ ಹೇಳಿಕೆಗಳನ್ನು "ಆತ್ಮೀಕ ಸತ್ಯಗಳ" ಜೊತೆಯಲ್ಲಿ

ಸಮನಾಗಿ ಬಳಸಿದೆ ಅದು ಬಹಳ ಸರಳವಾಗಿದೆ, ಅದು ಸತ್ಯವನ್ನು ತಿಳಿಸುವ ಸಾಧನವಾಗಿದೆ. ಈ ಕೆಳಗಿನಂತೆ ಅವುಗಳನ್ನು ವಿವರಿಸಬಹುದು:

*ಮಾತಾಡಿದ ಹೇಳಿಕೆ ಅಥವಾ ಕಥೆ*

---

*ಹೇಳಿದೆ ಇರುವ ಆತ್ಮೀಕ ಸತ್ಯ*

ಬೋಧನಾ ಕ್ರಮಗಳ ಕೆಲವು ಪುಸ್ತಕಗಳಲ್ಲಿ,[10] "ಸಾಮಾನ್ಯ" ತಾಂತ್ರಿಕ ಅರ್ಥ "ಸಮನಾದ ಹೋಲಿಕೆ"[11] ಅದೇ ತರಹ ಇರುವ ಪದ ಉದಾಹರಣೆ ಬೀಟ್‌ರೂಟಿನ ಕೆಂಪಿನಂತೆ, ಇಂಥಹ ಪದಗಳನ್ನು ಹೊಸ ಒಡಂಬಡಿಕೆಯಲ್ಲಿ ಬಳಸಲೇಬೇಕು ಎಂಬ ನಿಯಮಗಳಿರುವದಿಲ್ಲ. ಕೆಲವು ಸಾಮ್ಯಗಳನ್ನು "ಅದರಂತೆ" ಎಂದು ಬಳಸಿದೆ (ಮತ್ತಾಯ 13:31, 33, 44, 45). ಆದರೆ ಎಲ್ಲಾ ಸಾಮ್ಯಗಳನ್ನು ಈ ವಿಧವಾಗಿ ಬಳಸಿರುವದಿಲ್ಲ (ಮತ್ತಾಯ 13:3; ನೋಡಿ ಲೂಕ 7:41, 42). ಇನ್ನೂ ಕೆಲವು ಸಾಮ್ಯಗಳನ್ನು ವಿವರಿಸುವಲ್ಲಿ ಮುಂದುವರೆದಿರುವದಿಲ್ಲ. ಅವುಗಳನ್ನು ಸಂಕ್ಷಿಪ್ತಮಾಡಲಾಗಿದೆ (ಲೂಕ 6:39).

ಸಾಮ್ಯಗಳನ್ನು ಅರ್ಥಗಳನ್ನು ಹೊಂದಿರುವ "ಪರಲೋಕದ ಲೌಕಿಕ ಕಥೆಗಳು ಎಬುದಾಗಿಯೂ ಪರಿಗಣಿಸಲಾಗಿದೆ." ಒಳ್ಳೆಯ ಸಮಾರ್ಯದವನು (ಲೂಕ 10:30-37) ಕಳೆದು ಹೋದ ಮಗನು (ಲೂಕ 15:11-32) ಎಂಬ ಸಾಮ್ಯಗಳು ಈ ಸಾಲಿಗೆ ಸೇರಿವೆ. ಕೆಲವು ಸಾಮ್ಯಗಳನ್ನು ವಿಂಗಡನೆ ಮಾಡುವದು ಕಷ್ಟಕರವಾಗಿದೆ (ನೋಡಿ ಲೂಕ 6:39; 8:16).

ಯೇಸುವಿನ ಸಾಮ್ಯಗಳ ಪಟ್ಟಿಯನ್ನು ಪರಿಶೀಲಿಸಿದರೆ, ಅವುಗಳಲ್ಲಿ ಕೆಲವನ್ನು ಸಮಾನವಾದದ್ದು, ಸಂಕೇತ, ಉದಾಹರಣೆ ಹಾಗೂ ಹೊಂದಿಕೆಯ ಮಾತುಗಳು ಎಂದು ಕಂಡು ಹಿಡಿಯಬಹುದು.[12] ಲೂಕ 4:23, ಜ್ಞಾನದ ಯುಕ್ತಿಯನ್ನು ಸಾಮ್ಯವೆಂದು ಪರಿಗಣಿಸಿದೆ.[13] ಹೊಸ ಒಡಂಬಡಿಕೆಯ ಸಾಮ್ಯಗಳನ್ನು, ಪರಿಚಿತ ಪರಿಸ್ಥಿತಿಗೂ[14] ಹಾಗೂ ಅಪರಿಚಿತ ಪರಿಸ್ಥಿತಿಗೂ, ಸತ್ಯವನ್ನು ತಿಳಿಸುವಂತೆ ಬಳಸಲಾಗಿದೆ.

**ಸಾಮ್ಯಗಳು: ಏಕೆ?**

ಯೇಸು ಸಾಮ್ಯಗಳನ್ನು ಯಥೇಚ್ಛವಾಗಿ ಬಳಸಿರುವದು, ಶಿಷ್ಯರಿಗೆ ಆಶ್ಚರ್ಯವಾಗಿದೆ. ಅದನ್ನು ಆತನು ಹೇಳಿ ಮುಗಿಸಿದ ನಂತರ, "ಶಿಷ್ಯರು ಆತನಿಗೆ ಏಕೆ ನೀನು ಸಾಮ್ಯರೂಪವಾಗಿ ಮಾತಾಡುವಿ?" ಎಂದು ಕೇಳಿದರು (ಮತ್ತಾಯ 13:10). ಏಕೆ ಕ್ರಿಸ್ತನು ಸಾಮ್ಯಗಳನ್ನು ಉಪಯೋಗಿಸಿದನು?

*ಮೊದಲನೆಯದಾಗಿ, ಜ್ಞಾನದ ಮನಸ್ಸು ಉಳ್ಳವರಿಗೆ ಸತ್ಯವನ್ನು ಪ್ರಕಟಪಡಿಸಲು ಇವುಗಳನ್ನು ಬಳಸಿದನು.* ಸಾಮ್ಯಗಳು ಎಂದರೆ ಅದರಲ್ಲಿ ಅಡಗಿರುವ ಉದ್ದೇಶ ಎಂಬುದು ಗಮನಾರ್ಹ:

- ಪ್ರತಿಯೊಬ್ಬರು ಸಾಮ್ಯಗಳನ್ನು ಇಷ್ಟಪಡುತ್ತಾರೆ.
- ಸಾಮ್ಯಗಳು ಆಲೋಚನೆ ಮಾಡುವ ಪ್ರಚೋದಿಸುತ್ತೇವೆ. "ಹೇಗೆಂದರೆ ಏನು?" ಎಂದು ಪ್ರಶ್ನೆ ಕೇಳುವಂತೆ ಮಾಡುತ್ತದೆ.
- ಅವುಗಳು ನಮಗೆ ಬೆಳಕನ್ನು ನೀಡಿ: ನಿಯಮಗಳನ್ನು ಪಾಲಿಸುವಂತೆ ಮಾಡುತ್ತವೆ.
- ಸಾಮ್ಯಗಳಿಂದ ಸತ್ಯದ: ನೆನಪು ಉಳಿಯುತ್ತದೆ.

ಸಾಮ್ಯಗಳು ನಮ್ಮ ಜ್ಞಾನಕ್ಕೆ ಅರ್ಥವನ್ನು ನೀಡಿ, ಆತ್ಮೀಕ ಧ್ಯೇಯಗಳನ್ನು ತಿಳಿಸುತ್ತವೆ. ಯೇಸುವಿನ ಶಿಷ್ಯರಿಗೂ ಅವುಗಳು ಸಹಾಯಮಾಡಿವೆ, ಅದರಲ್ಲಿ ಸಂದೇಹವಿಲ್ಲ. ಯೇಸು ಅದನ್ನು ಮನೆಯ ಯಜಮಾನನಿಗೆ ಹೋಲಿಸಿ, "ಅವನು ತನ್ನ ಬೊಕ್ಕಸದೊಳಗಿಂದ ಹಳೆ, ಮತ್ತು ಹೊಸ ವಸ್ತುಗಳನ್ನು ತರುವನು" (ಮತ್ತಾಯ 13:52). ಸಾಮ್ಯಗಳು ಹಳೆಯ ಸತ್ಯಗಳನ್ನು ಬೋಧಿಸುವ ಹೊಸ ಮಾರ್ಗಗಳಾಗಿವೆ.

*ಎರಡನೆಯದಾಗಿ, ಜ್ಞಾನ ಹೀನರು ಜ್ಞಾನವನ್ನು ಪಡೆಯದಂತೆ, ಸಾಮ್ಯಗಳ ಬಳಕೆಯಾಗಿದೆ.* ಏಕೆ ಸಾಮ್ಯರೂಪವಾಗಿ ಆತನು ಮಾತಾಡುವನು ಎಂಬ ಶಿಷ್ಯರ ಪ್ರಶ್ನೆಗೆ, ಆತನು ನಕರಾತ್ಮಕವಾಗಿ ಮಾತಾಡಿ, "ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು. ನಾನು ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುವದಕ್ಕೆ ಕಾರಣವೇನಂದರೆ ಅವರಿಗೆ ಕಣ್ಣಿದ್ದರೂ ನೋಡುವದಿಲ್ಲ, ಕಿವಿಯಿದ್ದರೂ ಕೇಳುವದಿಲ್ಲ ಮತ್ತು ತಿಳುಕೊಳ್ಳುವದಿಲ್ಲ" (ಮತ್ತಾಯ 13:13). ಹಾಗೂ ಯೆಶಾಯ ಗ್ರಂಥದಿಂದ: "ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ಗ್ರಹಿಸಿ ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದದ ಹಾಗೆ ಈ ಜನರ ಹೃದಯಕ್ಕೆ ಹೃದಯಕ್ಕೆ ಕೊಬ್ಬೇರಿಸಿ ಕಿವಿಯನ್ನು ಮಂದಮಾಡಿ ಕಣ್ಣಿಗೆ ಅಂಟುಬಳಿ ಎಂದು ನನಗೆ ಹೇಳಿದನು ..." (ಮತ್ತಾಯ 13:15; ನೋಡಿ ಯೆಶಾಯ 6:10).

ಈ ವಾಕ್ಯಗಳನ್ನು ಓದುವಾಗ, ಅದರ ಹಿನ್ನೆಲೆಯನ್ನು ನೆನಪು ಮಾಡಿಕೊಳ್ಳಿರಿ: ಬೆಲ್ಜೆಬೂಲನ ಸಹಾಯದಿಂದ ದೆವ್ವಗಳನ್ನು ಆತನು ಬಿಡಿಸುವನು ಎಂಬ ಫರಿಸಾಯರ ವಾದಕ್ಕೆ, ಅವರ ಹೃದಯಗಳು ಸರಿಪಡಿಸಲಾರದ ಸ್ಥಿತಿಗೆ ತಲುಪಿದೆ ಎಂದು ಯೇಸು ಹೇಳಿದನು, ಸತ್ಯವನ್ನು ಪಡೆಯಲು ಅವರು ಯೇಸುವಿನ ಮಾತುಗಳನ್ನು ಆಲಿಸದೆ ಆತನಲ್ಲಿ ತಪ್ಪುಗಳನ್ನು ಕಂಡುಹಿಡಿಯಲು ಮಾತನಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಯೇಸು ಅವರು ಅರ್ಥಮಾಡಿಕೊಳ್ಳಲಾಗದ ಸಾಮ್ಯಗಳನ್ನು ಪ್ರಯೋಗಿಸಿದನು, ಆದರೆ ಅದರಿಂದ ಜ್ಞಾನಿಗಳಿಗೆ ಜ್ಞಾನವು ಪ್ರಕಟವಾಯಿತು. ಅವರ ಹೃದಯಗಳಲ್ಲಿ ಅದರ ಅರ್ಥವನ್ನು ಗ್ರಹಿಸಿಕೊಂಡರು (ಮತ್ತಾಯ 13:16, 17).

ಸಾಮ್ಯಗಳು ಕಠಿಣವಾದ ಹೃದಯಗಳನ್ನು ಹಾಗೂ ಯಥಾರ್ಥವಾದ ಹೃದಯಗಳನ್ನು ಪ್ರತ್ಯೇಕ ಮಾಡಿದವು. ಅಜ್ಞಾನಿಗಳಿಗೆ ಅವುಗಳಿಂದ ತೀರ್ಪು ಉಂಟಾಯಿತು.

**ಸಾಮ್ಯಗಳು: ಹೇಗೆ?**

ಕ್ರಿಸ್ತನ ಸೇವೆಯಲ್ಲಿ ಸಾಮ್ಯಗಳು ಪ್ರಮುಖ ಪಾತ್ರ ವಹಿಸಿರುವದರಿಂದ, ಅವುಗಳನ್ನು ವಿವರಿಸುವ ಕ್ರಮವನ್ನು ನಾವು ತಿಳಿಸುತ್ತೇವೆ.

ವಾಕ್ಯದ ಪ್ರಕಾರ ಅವುಗಳನ್ನು ವಿವರಣೆ ನೀಡಲು ಮೂರು ವಿಧಾನಗಳನ್ನು ಅಳವಡಿಸಬೇಕು: (1) ಅದರಲ್ಲಿನ ಹಿನ್ನಲೆಯ ಅರ್ಥವನ್ನು ಗ್ರಹಿಸಬೇಕು; (2) ಅದರಲ್ಲಿನ ಸಂಬಂಧವಿರುವ ಸತ್ಯವಾಕ್ಯದ ಅರ್ಥವನ್ನು ಗ್ರಹಿಸಬೇಕು; (3) ಅದರಲ್ಲಿನ ಸಮಾನತೆಯನ್ನು ಅರಿಯಬೇಕು ಈ ವಿಧಾನನಗಳ ಮೂಲಕ ಸಾಮ್ಯದ ಅಧ್ಯಯವನ್ನು ಮಾಡಬಹುದು: (1) ಅದರ ಹಿನ್ನೆಲೆಯ ಕಥೆ ಹಾಗೂ ಯೇಸು ನೀಡಿದ ವ್ಯಾಖ್ಯಾನವನ್ನು ಕಂಡುಹಿಡಿಯಿರಿ. ಜೀವಿತದ ಕಾಲಕ್ಕೆ ಕೆಲವು ಸಾಮ್ಯಗಳು ಅನುಕೂಲವಾಗಿದ್ದರೆ, ನಾವಿರುವ ಕಾಲದಲ್ಲಿ, ಅವುಗಳು ಬಳಕೆಯಲ್ಲಿರದೆ ಇರಬಹುದು. (2) ಅದರಲ್ಲಿನ ಮೂಲ ಸತ್ಯವನ್ನು ಅರಿಯಿರಿ. ಒಂದೊಂದು ಸಾರಿ ಯೇಸು, ಸಾಮ್ಯಗಳ ವಿವರಣೆ ನೀಡಿರುವನು (ಮತ್ತಾಯ 13:18-23, 36-43). ಕೆಲವು ಸಾರಿ ಅವುಗಳನ್ನು ಆತನು ಕಾರ್ಯಗತ ಮಾಡಿದನು (ಲೂಕ 7:42ಬಿ-47; 10:29, 36, 37; 12:40). ಸಾಮ್ಯದ ಸತ್ಯವನ್ನು ಅರಿಯಲು ಅದರ ಹಿನ್ನೆಲೆಯು ಸೂಚನೆಯನ್ನು ನೀಡುತ್ತದೆ (ಲೂಕ 15:1-3; 18:1). ಕೆಲವು ಸಾರಿ ಕ್ರಿಸ್ತನ ರಾಜ್ಯದ ಸತ್ಯಗಳ ಸಾಮಾನ್ಯ

ಜ್ಞಾನವು ನಮಗೆ ಸಹಾಯ ಮಾಡುತ್ತದೆ. (3) ಸತ್ಯವನ್ನು ಹಾಗೂ ಸಾಮ್ಯಗಳನ್ನು ಒಟ್ಟುಗೂಡಿಸಿದರೆ, ಅದರಲ್ಲಿನ ಮೂಲ ಸತ್ಯವನ್ನು ನೋಡಬಹುದು.

ಮೂರನೆಯ ವಿಧಾನದಂತೆ, ಅದರಲ್ಲಿನ ಪ್ರಮುಖ ಸತ್ಯವನ್ನು ಗಮನಿಸಿಕೊಳ್ಳಬೇಕು. (ಮುಂದಿನ ಪಾಠದಲ್ಲಿ ಎರಡು ಸಾಮ್ಯಗಳನ್ನು ವಿವರಿಸುತ್ತೇನೆ). ಸಾಮ್ಯಗಳಿಗೆ ಅತಿಯಾದ ಅರ್ಥವನ್ನು ನೀಡುವ ಪ್ರಯತ್ನವನ್ನು ಮಾಡಬಾರದು.[15] ಉದಾಹರಣೆಗೆ, ಒಬ್ಬ ಮನುಷ್ಯನು ಹೂಳಿಟ್ಟ ದ್ರವ್ಯವಿರುವ ಭೂಮಿಯನ್ನು ಕೊಂಡುಕೊಂಡನು (ಮತ್ತಾಯ 13:44). ಅದರಲ್ಲಿ ದೇವರ ರಾಜ್ಯದ ಮಹತ್ವವು ಪ್ರಮುಖವಾಗಿದೆ ವಿನಃ ಮನುಷ್ಯನು ಮಾಡಿದ ಕ್ರಿಯೆಯಲ್ಲಿ (ಅದು ಉತ್ತಮವೇ ಆಗಿರಬಹುದು). ಈ ಹಿಂದೆ ನಾವು ಇಬ್ಬರು ಸಾಲಗಾರರ ದೃಷ್ಟಾಂತವನ್ನು ನೋಡಿದೆವು. ಅದರಲ್ಲಿ ದೇವರನ್ನು, ಸಾಲ ನೀಡುವವನು ಎಂದು ಹೋಲಿಸಬಾರದು. ಮುಂದಿನ ಎರಡು ಸಾಮ್ಯ ಗಳಲ್ಲಿ ಇದನ್ನು ಗಮನಿಸಲಿದ್ದೇವೆ: ಎಲ್ಲವನ್ನು ಸರಿಪಡಿಸುವ ವಿಧಾನವನ್ನು ನಾವು "ಅನುಸರಿಸುವದಾದರೆ" ಲೂಕ 12:39, 40 ಯೇಸುವಿನ ಮಾತಿನಂತೆ, "ಯೇಸುವನ್ನು ಕಳ್ಳನೆಂದು ಕರೆಯಲಾಗದು, ಲೂಕ 18:1-6 ರಂತೆ ದೇವರನ್ನು ಅನೀತಿ ವಂತನಾದ ನ್ಯಾಯಾಧಿಪತಿ ಎಂದು ಕರೆಯಲಾಗದು.

ಸಾಮ್ಯದ ಅರ್ಥವನ್ನು ನೀಡುವ ಇನ್ನು ಕೆಲವು ವಿಧಾನಗಳನ್ನು ಗಮನಿಸೋಣ. (1) "ದೇವರ ರಾಜ್ಯದ" ಕುರಿತ ಸಾಮ್ಯಗಳು (ಮತ್ತಾಯ 13:24, 31, 33, 44, 45, 47). ದೇವರ ರಾಜ್ಯದ ಜನರು ದೇವರ ಸಭೆಯು, ದೇವರ ರಾಜ್ಯದ ಗೂಢಾರ್ಥಗಳನ್ನು ಅರಿಯುವ ಉದ್ದೇಶವಾಗಿದೆ.[16] (2) ಎರಡು ಸಾಮ್ಯಗಳು ಒಂದೇ ವಿಧವಾದ ವಿವರಣೆಗಳನ್ನು ಹೊಂದಿದ್ದರೂ, ಆ ವಿವರಣೆಗಳಲ್ಲಿ ಒಂದೇ ವಿಧವಾದ ಅರ್ಥಗಳಿರುವದಿಲ್ಲ. ಉದಾಹರಣೆ: ಬಿತ್ತುವವನ ಸಾಮ್ಯದಲ್ಲಿ, "ಬೀಜ" ದೇವರ ವಾಕ್ಯವಾಗಿದೆ (ಲೂಕ 8:11). "ಹಣಜಿಯ" ಸಾಮ್ಯದಲ್ಲಿ "ಬೀಜವು" ದೇವರ ರಾಜ್ಯದ ಮಕ್ಕಳು (ಮತ್ತಾಯ 13:38). (3) ಸಾಮ್ಯಗಳು ಅಲಂಕಾರಿಕ ಮಾತುಗಳಾಗಿರುವದರಿಂದ, ಸತ್ಯವನ್ನು ಪ್ರಕಟಿಸದೆ, ಸತ್ಯ ಏನು ಎಂದು ಪ್ರಕಟಿಸುತ್ತದೆ. ಆದ್ದರಿಂದ ಸಾಮ್ಯದ ಅರ್ಥವನ್ನು ವಿವರಿಸುವಲ್ಲಿ, ಧಾರ್ಮಿಕ ಸತ್ಯವನ್ನು ರುಜುವಾತು ಪಡಿಸಲು ಪ್ರಯತ್ನ ಮಾಡಬಾರದು.[17]

ಇಲ್ಲಿಗೆ ಸಾಮ್ಯದ ಹಿನ್ನೆಲೆ ಅರಿಯುವದನ್ನು ನಿಲ್ಲಿಸೋಣ. ಆ ಕಾರ್ಯನಿರತ ದಿನದಲ್ಲಿ ಯೇಸು ಹೇಳಿದ ಸಾಮ್ಯಗಳನ್ನು ಅಧ್ಯಯನ ಮಾಡೋಣ.

## ಸಾಮ್ಯಗಳು: ಉದಾಹರಣೆಗಳು
## (ಮತ್ತಾಯ 13:3-9, 18-33, 36-50;
## ಮಾರ್ಕ 4:3-9, 14-20, 26-32; ಲೂಕ 8:5-8, 11-15)

ಯೇಸು ಆ ದಿನಗಳಲ್ಲಿ ತಿಳಿಸಿರುವ ಎಲ್ಲಾ ಸಾಮ್ಯಗಳ ಮಾಹಿತಿ ಇಲ್ಲದಿದ್ದರೂ (ಮಾರ್ಕ 4:2), ಆದರೆ ಮತ್ತಾಯನು ಒಂಬತ್ತು ಸಾಮ್ಯಗಳನ್ನು ತಿಳಿಸಿರುವನು. ಮತ್ತಾಯನಲ್ಲಿರುವಂಥ ಸಾಮ್ಯಗಳನ್ನು, ಹಾಗೂ ಮತ್ತಾಯನಲ್ಲಿ ಇಲ್ಲದವುಗಳನ್ನು ಮಾರ್ಕನು ತಿಳಿಸಿರುವನು ಲೂಕನು ಬಿತ್ತುವವನ ಸಾಮ್ಯವನ್ನು ಮಾತ್ರ ತಿಳಿಸಿರುವನು.

### ಬಿತ್ತುವವನ ಸಾಮ್ಯ (ಮತ್ತಾಯ 13:3-9, 18-23; ಮಾರ್ಕ 4:3-9, 14-20; ಲೂಕ 8:5-8, 11-15)

ಸಾಮರಸ್ಯ ಹೊಂದಿರುವ ಮೂರು ಸುವಾರ್ತೆಗಳಲ್ಲೂ, ಬಿತ್ತುವವನ ಸಾಮ್ಯವು ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಶಿಷ್ಯರು ಇದನ್ನು ಅರ್ಥಮಾಡಿಕೊಳ್ಳುವದಕ್ಕೆ ಸಾಧ್ಯವಾಗದಿದ್ದರೆ, ಬೇರೆಯವುಗಳನ್ನು ತಿಳಿಯಲು ಅಸಾಧ್ಯ ಎಂದು ಯೇಸು ತಿಳಿಸಿದನು

(ಮಾರ್ಕ 4:13). ಇತರೆ ಸಾಮ್ಯಗಳಿಗೆ ಅದು ಮುಖ್ಯ ಬಿಂದುವಾಗಿದೆ:[18] ಸಾಮ್ಯಗಳನ್ನು ಅರಿಯಲು ಇದು ಪ್ರಮುಖ ಅಂಶವಾಗಿದೆ. ಯೇಸುವಿನ ಬಳಿಗೆ ಬಂದವರಲ್ಲಿ ಅನೇಕರು ಕಠಿಣ ಹೃದಯಗಳಾಗಿದ್ದು ಅಥವಾ ಹೃದಯ ವಿಭಾಗವಾದವರಾಗಿದ್ದರು. ಆದ್ದರಿಂದ ಇತರೆ ಸಾಮ್ಯಗಳನ್ನು ಸಾಮಾನ್ಯ ವಾಗಿ ಅರ್ಥಮಾಡಿಕೊಳ್ಳಲು ಸಹಾಯಿಸುತ್ತದೆ. ಇದನ್ನು ವಿಮರ್ಶೆ ಮಾಡುವದರಿಂದ, ಕ್ರಿಸ್ತನ ಅನುಯಾಯಿಗಳು ಇತರೆ ಸಾಮ್ಯಗಳನ್ನು ಸಹ ವಿಮರ್ಶೆ ಮಾಡಬಹುದಾಗಿದೆ, ಮುಂದಿನ ಪ್ರಸಂಗದಲ್ಲಿ ಬಿತ್ತುವವನ ಸಾಮ್ಯವನ್ನು ಪರಿಶೀಲನೆ ಮಾಡಬಹುದಾಗಿದ್ದರೂ, ಅವುಗಳಲ್ಲಿ ಕೆಲವು ಕ್ರಮಗಳನ್ನು ಈ ಸಮಯದಲ್ಲಿ ಅನುಸರಿಸಬೇಕಾಗುತ್ತದೆ.

ಯೇಸು ಸಮುದ್ರದ ತೀರದಲ್ಲಿ ನಾಲ್ಕು ವಿಧವಾದ ನೆಲಗಳ ಬಗ್ಗೆ ಉಪದೇಶ ಆರಂಭಿಸಿದನು: ದಾರಿಯ ಮಗ್ಗುಲು,[19] ಬಂಡೆಯ ನೆಲ, ಮುಳ್ಳು ಭೂಮಿ,[20] ಒಳ್ಳೆಯ ನೆಲ.[21] ಅವರೆಲ್ಲರೂ ಜನರಿಂದ ಪ್ರತ್ಯೇಕಗೊಂಡ ತಕ್ಷಣ ಶಿಷ್ಯರು ಯೇಸುವಿಗೆ ಸಾಮ್ಯದ ಅರ್ಥವನ್ನು ಕೇಳಿದರು (ಮಾರ್ಕ 4:10; ಲೂಕ 8:9).[22] ಆ ಪ್ರತಿಯೊಂದು ನೆಲವೂ ವಾಕ್ಯವನ್ನು ಸ್ವೀಕರಿಸುವ ವಿವಿಧ ಹೃದಯಗಳ ಚಿತ್ರಣವಾಗಿತ್ತು. "ಯಥಾರ್ಥ ಹೃದಯವು" ಮಾತ್ರ, ವಾಕ್ಯವನ್ನು ಸ್ವೀಕರಿಸಿ ಆತ್ಮೀಕವಾಗಿ ಫಲಭರಿತವಾದ ಜೀವಿತವನ್ನು ಜೀವಿಸಲು ಸಾಧ್ಯ (ಲೂಕ 8:15).

ಇಂಥಹ, ನಾಲ್ಕು ವಿಧದ ಹೃದಯಗಳುಳ್ಳ ಜನರನ್ನು ಯೇಸು ಪ್ರತಿದಿನವು ಸಂಧಿಸುತ್ತಿದ್ದನು. ಕಠಿಣ ಹೃದಯಿಗಳಾದ ಫರಿಸಾಯರು, ಯೇಸುವನ್ನು ತಪ್ಪಿನಲ್ಲಿ ಸಿಕ್ಕಿಸಬೇಕೆಂದು ಪ್ರಯತ್ನಿಸುತ್ತಿದ್ದರು. ಬುದ್ಧಿ ಇಲ್ಲದ ಜನರು ಯೇಸು ಮಾಡಿದ ಸೇವೆ, ಆತನ ಮಹತ್ಕಾರ್ಯಗಳಲ್ಲಿ ಆನಂದ ಪಡುತ್ತಿದ್ದರು, ಆದರೆ ಅವರು ಯೇಸುವಿನ ನಿಜವಾದ ತತ್ವವನ್ನು ಅರಿಯದಾದರು. ಅಲ್ಲಿ ಎರಡು ಮನಸ್ಸಿನ ಜನರು ಇದ್ದರು. ಅವರು, ಹಣದಾಶೆಯುಳ್ಳ ಯೂದನ ಮನಸ್ಸನ್ನು ಹೊಂದಿದವರಾಗಿದ್ದರು (ನೋಡಿ ಯೋಹಾನ 12:6). ಯೇಸುವಿನ ಉದ್ದೇಶವನ್ನು ಈಡೇರಿಸ ಬಹುದಾದ ಉತ್ತಮ ಮನಸ್ಸಿನ ಜನರು ಸಹ ಯೇಸುವಿನ ಸುತ್ತಲು ಇದ್ದರು.

ಯೇಸು ಯೆಹೂದ್ಯರಿಂದ ಏಕೆ ತಿರಸ್ಕರಿಸಲ್ಪಟ್ಟನು ಎಂಬುದಕ್ಕೆ ಈ ಸಾಮ್ಯಗಳು ಸಾಕ್ಷಿಯಾದವು, ಎಂಬುದನ್ನು ಶಿಷ್ಯರು ಅರಿತಿದ್ದರು. ಶಿಷ್ಯರ ಮುಂದಿನ ಪ್ರಸಂಗದ ಸೇವೆಯಲ್ಲಿ ಇವುಗಳು ಬಹು ಪ್ರಯೋಜನಕಾರಿಯಾಗಿದ್ದವು: ಸುವಾರ್ತೆಯನ್ನು ಕೆಲವರು ಅಂಗಿಕರಿಸುವ ಹಾಗೂ ಇನ್ನೂ ಕೆಲವರು ಅಂಗೀಕರಿಸದೆ ಇರುವ ಕಾರಣವನ್ನು ತಿಳಿಸುತ್ತಿದ್ದವು. ಈ ದಿನಗಳಲ್ಲಿ, ಪ್ರಪಂಚದಾದ್ಯಂಥ ಪ್ರಸಂಗ ಹಾಗೂ ಉಪದೇಶ ಮಾಡುವ ಪ್ರಸಂಗಿಗಳಿಗೆ ಈ ಸಾಮ್ಯವು ಬಹು ಪ್ರಮುಖವಾಗಿದೆ.

**ರಹಸ್ಯ ಬೆಳವಣಿಗೆಯ ಸಾಮ್ಯ (ಮಾರ್ಕ 4:26-29)**

ಮಾರ್ಕನ ಪ್ರಕಾರ, ಬಿತ್ತುವವನ ಸಾಮ್ಯವನ್ನು ಯೇಸು ಹೇಳಿದ ಮುಗಿಸಿದ ತಕ್ಷಣ, ಕೊಯ್ಲಿನ ಕಾಲದ ವರೆಗೆ, ಬೆಳೆಯುತ್ತಿದ್ದ ಬೀಜದ ಬಗ್ಗೆ ತಿಳಿಸಿದನು.[23] ಪೋಷಣೆ ಅಗತ್ಯವಿಲ್ಲದ ಬೀಜಗಳ ಕುರಿತ ಸಾಮಾನ್ಯ ಜ್ಞಾನವು ಎಲ್ಲರಿಗೂ ಇರುತ್ತದೆ. ಹಿಂದೆ ತಿಳಿಸಿದ ಪ್ರಕಾರ, ಮನುಷ್ಯನ ಹೃದಯವು ಭೂಮಿಯಾಗಿದ್ದರೆ,[24] ಸುವಾರ್ತೆಯು ಬೀಜವಾಗಿರುತ್ತದೆ ಎಂದು ತಿಳಿಯೋಣ. ಶಿಷ್ಯರ ಉತ್ತೇಜನಕ್ಕಾಗಿ ಈ ಸಾಮ್ಯವನ್ನು ಹೇಳಲಾಗಿದೆ:

- ಅರಿವಿನ ಪ್ರಜ್ಞೆ ಇದ್ದರೂ ಸರಿಯೇ, ಇಲ್ಲದಿದ್ದರೂ ಸರಿಯೇ. ಕೇಳುಗರ ಹೃದಯದಲ್ಲಿ ಸುವಾರ್ತೆಯು ಪರಿಣಾಮವನ್ನು ಬೀರುತ್ತದೆ.
- ಆ ಬೀಜವು ಮೊಳಕೆಯೊಡೆದು ಅಭಿವೃದ್ಧಿ ಹೊಂದುವದಕ್ಕೆ ಸಮಯವನ್ನು

ತೆಗೆದುಕೊಳ್ಳುತ್ತದೆ, ಆದ್ದರಿಂದ ತಾಳ್ಮೆಯು ಅತಿ ಅಗತ್ಯ.

- ಬಿತ್ತುವ ಕಾರ್ಯದಲ್ಲಿ ನಾವುಗಳು ನಂಬಿಗಸ್ತರಾಗಿದ್ದರೆ, ಅಂತಿಮವಾದ ಬೆಳ ವಣಿಗೆಯು ದೇವರಿಂದ ಬರುತ್ತದೆ (1 ಕೊರಿಂಥ 3:6).

ನಲವತ್ತೇಳು ವರ್ಷಗಳ ಹಿಂದೆ J. W. ರಾಬರ್ಟ್‌ರವರಿಂದ ನಾನು ಕ್ರಿಸ್ತನ ಜೀವನ ಚರಿತ್ರೆಯನ್ನು ಅಭ್ಯಾಸ ಮಾಡುತ್ತಿರುವಾಗ, ಒಬ್ಬ ಸುವಾರ್ತಾ ಬರಹಗಾರನು, ಕರ್ತನ ಸಭೆಯು ಇಲ್ಲದೆ ಇದ್ದ ಸ್ಥಳದಲ್ಲಿ ಸುವಾರ್ತೆಯನ್ನು ಪ್ರಸಂಗಿಸಿದ ಸಂಗತಿಯನ್ನು ನನಗೆ ತಿಳಿಸಿದರು. ಮೂರು ವಾರಗಳ ಕಾಲ ಆ ಪ್ರಸಂಗಿಯು, ಪೂರ್ಣ ಪ್ರಯಾಸದಿಂದಲೂ, ಪೂರ್ಣ ಹೃದಯದಿಂದಲೂ, ಪರಿಣಾಮಕಾರಿಯಾದ ಕಾರ್ಯವಾಗಲಿ ಎಂದು ಪ್ರಸಂಗಿಸಿದನು. ಇದರ ಪರಿಣಾಮವಾಗಿ, ವಿಕಾರ ರೂಪಿಯಾದ ಒಬ್ಬ ಹೆಣ್ಣು ಮಗಳು ಮಾತ್ರ ದೀಕ್ಷಾಸ್ನಾನ ಮಾಡಿಸಿಕೊಂಡಳು. ಪ್ರಸಂಗಿಯು ತಾನು ಬೇಸರ ಪಟ್ಟು ಕೊಳ್ಳದಂತೆ ಪ್ರಯತ್ನಿಸಿದನು. ಆದರೆ ಆ ಬೀಜವು ನಿಧಾನವಾಗಿ ಹಾಗೂ ಗೋಪ್ಯವಾಗಿ ಬೆಳೆಯಲು ಆರಂಭಿಸಿತು. ಆ ಚಿಕ್ಕ ಹುಡುಗಿ ಬೆಳೆದು ಮದುವೆಯಾಗಿ ಆರುಜನ ಗಂಡು ಮಕ್ಕಳಿಗೆ ತಾಯಿಯಾದಳು, ಆ ಗಂಡು ಮಕ್ಕಳೆಲ್ಲರೂ ಪ್ರಸಂಗಿಗಳಾದರು. "ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೆ ಇರೋಣ ... ಮುಂಜಾನೆ ಬೀಜಬಿತ್ತು, ಸಂಜೆಯ ತನಕ ಕೈದೆಗೆಯಬೇಡ; ಇದು ಸಫಲವೋ, ಅದು ಸಫಲವೋ, ಒಂದು ವೇಳೆ ಎರಡೂ ಚೆನ್ನಾಗುವವೋ ನಿನಗೆ ತಿಳಿಯದು" (ಗಲಾತ್ಯ 6:9; ನೋಡಿ ಪ್ರಸಂಗಿಗಳು 11:6).

### ಹಣಜಿಯ ಕುರಿತಾದ ಸಾಮ್ಯ (ಮತ್ತಾಯ 13:24-30, 36-43)

ಬೆಳೆಯುತ್ತಿದ್ದ ಇನ್ನೊಂದು ಬೀಜದ ಕುರಿತಾಗಿಯೂ ಯೇಸು ಮಾತನಾಡಿದನು: ಗೋದಿಯ ಬೀಜವನ್ನು ಬಿತ್ತಿದ ತಕ್ಷಣ ವೈರಿಯು ಹಣಜಿಯ ಬೀಜವನ್ನು ಬಿತ್ತಿದನು ಆರಂಭದಲ್ಲಿ ಹಣಜಿಯು ಸಹ ಗೋದಿಯ ಹುಲ್ಲಿನಂತೆ ಇರುತ್ತಿತ್ತು.[25] ಇಂಥಹ ನಾಶನದ ಕಾರ್ಯವನ್ನು ಕಂಡ ಸೇವಕರು, ಯಜಮಾನನ ಬಳಿಗೆ ಬಂದು ಹಣಜಿಯನ್ನು ಕಿತ್ತು ಹಾಕುವೆವು ಎಂದು ಹೇಳಿದರು. ಈಗಾಗಲೇ ಚಿಕ್ಕ ಸಸಿಗಳ ಬೇರುಗಳು, ಒಂದಕ್ಕೊಂದು ಬೆಸೆದುಕೊಂಡಿರಬಹು ದಾಗಿರುವದರಿಂದ ಯಜಮಾನನು ಅವರಿಗೆ, "ಬೇಡ" ನೀವು ಹಣಜಿಯನ್ನು ಕೀಳುವಾಗ, ಅದರ ಸಂಗಡ, ಗೋದಿಯನ್ನು ಕಿತ್ತೀರಿ ಅಂದನು (ಮತ್ತಾಯ 13:29). ಸುಗ್ಗಿಕಾಲದ ತನಕ ಎರಡೂ ಕೂಡ ಬೆಳೆಯಲಿ ಅಂದನು ಅಂತಿಮವಾಗಿ ಅವುಗಳನ್ನು ಪ್ರತ್ಯೇಕ ಮಾಡೋಣ ಅಂದನು (ವಚನ 30).

ನಂತರದಲ್ಲಿ ಶಿಷ್ಯರು ಈ ಸಾಮ್ಯದ ಅರ್ಥವನ್ನು ಕೇಳಿದರು (ವಚನ 36). ಅದಕ್ಕೆ ಯೇಸು ಬಿತ್ತುವ ವೈರಿ ಎಂದರೆ ಸೈತಾನನು, ಸುಗ್ಗಿಕಾಲ ಎಂದರೆ ಯುಗದ ಸಮಾಪ್ತಿ (ವಚನ 39). ಬರವಣಿಗೆಯ ಈ ಸರಣಿಯಲ್ಲಿ ಅಂತಿಮ ನ್ಯಾಯ ತೀರ್ಪಿನ ದಿನದ ಬಗ್ಗೆ ಎರಡು ಸಾಮ್ಯಗಳನ್ನು ತಿಳಿಸಲಾಗಿದೆ: ಅದರಲ್ಲಿ ಇದು ಕೂಡ ಒಂದಾಗಿದೆ.[26] ವಚನ 39ರಿಂದ 43ರವರೆ, ಎರಡನೇ ಬರೋಣ ಹಾಗೂ ನ್ಯಾಯತೀರ್ಪಿನ ಬಗ್ಗೆ ತಿಳಿಸಲಾಗಿದೆ.

ಕೆಲವರು ಈ ದೃಷ್ಟಾಂತವನ್ನು ಮುಂದಿಟ್ಟುಕೊಂಡು, ಸಭೆಗಳಲ್ಲಿರುವ ಅಪನಂಬಿಗಸ್ತರನ್ನು ಸಭೆಯಿಂದ ಈಗಲೇ ಹೊರಹಾಕಬಾರದೆಂಬ ತತ್ವವನ್ನು ಹೇಳು ವವರಾಗಿದ್ದಾರೆ. ಇಂಥಹ ಅನುವಾದವು ಯೇಸುವಿನ ಹೇಳಿಕೆಗೆ ತದ್ವಿರುದ್ಧವಾಗಿರುತ್ತದೆ (ಮತ್ತಾಯ 18:15-18; ನೋಡಿ 1 ಕೊರಿಂಥ 5:4, 5, 11, 13ಬಿ). J. W. ಮೆಕಾರ್ವೆಯವರು ಈ ವಿಚಾರದಲ್ಲಿ, "ಸಭೆಯ ಶಿಸ್ತಿನ ಕ್ರಮಕ್ಕೆ, ಈ ಸಾಮ್ಯದ ಉದಾಹರಣೆಯು ವಾಗ್ವಾದವಾಗಿ ಪರಿಗಣಿಸುತ್ತದೆ. ಅದು ತಪ್ಪಾದ ಅನಾವರಣವಾಗಿರುತ್ತದೆ. ಇಲ್ಲಿ ಭೂಮಿ ಎಂದರೆ ಸಭೆಯಾಗಿರದೆ, ಲೋಕವಾಗಿರುತ್ತದೆ, ಕೆಟ್ಟವರನ್ನು ಹೊರಹಾಕುವ ಸಂಗತಿಗೆ ದೂರವಾಗಿರುತ್ತದೆ[27] ಎಂದು ಹೇಳಿರುವರು.

ಜಾನ್ ಕಾರ್ಟರ್‌ರವರ ಪ್ರಕಾರ, "ದೇವರ ರಾಜ್ಯದ ಹಾಗೂ ಕೆಟ್ಟ ಲೋಕದ ಜನರು ಲೋಕಾಂತ್ಯದವರೆಗೆ ಒಟ್ಟಾಗಿಯೇ ಜೀವಿಸುವರು. ಆದ್ದರಿಂದ ಸಭೆಯಲ್ಲಿನ ಕೆಟ್ಟವರನ್ನು"[28] ಹೊರ ಹಾಕುವದಕ್ಕೆ ಈ ಸಾಮ್ಯವು ಯಾವುದೇ ಸಂಬಂಧವನ್ನು ಕಲ್ಪಿಸುವದಿಲ್ಲ.

ಬಹಳಷ್ಟು ಜನರು ದೇವರ ವಾಕ್ಯಕ್ಕೆ ಏಕೆ ಮನಸ್ಸನ್ನು ನೀಡುವದಿಲ್ಲ ಎಂಬ ವಿಚಾರವನ್ನು ಶಿಷ್ಯರಿಗೆ ತಿಳಿಸುವದಕ್ಕೆ ಈ ಸಾಮ್ಯವನ್ನು ನೀಡಿರಬಹುದು: ಇಲ್ಲಿ ಸೈತಾನನು ಕ್ರಿಯಾಶೀಲ ನಾಗಿದ್ದಾನೆ. ಹಾಗೂ ಅವರ ಸೇವೆಯಲ್ಲಿ ದೂರದೃಷ್ಟಿಯನ್ನು ಹೊಂದಿರಲು ಇದನ್ನು ನೀಡಿರಬಹುದು.

## ಸಾಸಿವೆಕಾಳಿನ ಹಾಗೂ ಹುಳಿ ಹಿಟ್ಟಿನ ಸಾಮ್ಯ

## (ಮತ್ತಾಯ 13:31-33ಣಿ ಮಾರ್ಕ 4:30-32)[29]

ದಾಖಲಾತಿಯ ಪ್ರಕಾರ, ಆ ದಿನದಲ್ಲಿ ನೀಡಲಾದ ಇತರೆ ಸಾಮ್ಯಗಳನ್ನು ಆತನು ವಿವರಿಸಿಹೇಳಲಿಲ್ಲ. ಬೆಳೆಯುತ್ತಿದ್ದ ಬೀಜದ ಬಗ್ಗೆಯ ಚರ್ಚೆ ಮುಂದುವರೆಯಿತು: ಈಗ ಸಾಸಿವೆ ಕಾಳಿನ ಸಾಮ್ಯ ಅದು ಸಣ್ಣ[30] ಬೀಜವಾದರೂ, ದೊಡ್ಡಗಿಡವಾಗಿದೆ.[31] ಶಿಷ್ಯರ ಉತ್ತೇಜನಕ್ಕಾಗಿ ಈ ಸಾಮ್ಯವನ್ನು ಹೇಳಿರಬಹುದು: ಕ್ರಿಸ್ತನ ಸಂಚಲನ ಅತಿ ಚಿಕ್ಕದ್ದಾಗಿದ್ದ ಆರಂಭವಾದರೂ ಅವರು ವಾಕ್ಯವನ್ನು ನಂಬಿಗಸ್ತಿಕೆಯಿಂದ ಸಾರುವದರ ಮೂಲಕ, ಯೇಸುವಿನ ಸಮಾಚಾರವು ಅವರ ಕನಸುಗಳನ್ನು ದಾಟಿ ಹೋಗುವ ಸಾಧ್ಯತೆಯಿತ್ತು. ಈ ಸುವಾರ್ತೆಯ ಪರಿಣಾಮವನ್ನು ಆಫ್ರಿಕಾ ಹಾಗೂ ಭಾರತ ದೇಶಗಳಲ್ಲಿ ಈಗ ಕಾಣಬಹುದಾಗಿದೆ.

ನಂತರ ತಿಳಿಸಿದ ಸಾಮ್ಯದಲ್ಲಿ (ಹುಳಿ ಹಿಟ್ಟಿನ ಸಾಮ್ಯ), ಬೀಜ ಬಿತ್ತುವ ಕಾರ್ಯದಿಂದ ಒಬ್ಬ ಮಹಿಳೆಯು ತನ್ನ ಮನೆಗಾಗಿ ರೊಟ್ಟಿಗಳನ್ನು ಮಾಡುವ ಕಾರ್ಯವನ್ನು ಕಾಣುತ್ತೇವೆ. ಈ ಹುಳಿ ಹಿಟ್ಟಿನ ಬಗ್ಗೆ ವಿವರಣೆ ಅಗತ್ಯವಿದೆ.[32] ರೊಟ್ಟಿ ಮಾಡುವ ಹಿಟ್ಟಿನಿಂದ ಸ್ವಲ್ಪವನ್ನು ತೆಗೆದು ಒಂದು ಬೆಚ್ಚಗಿನ ಬಟ್ಟೆಯಲ್ಲಿ ಸುತ್ತಿಡುತ್ತಿದ್ದರು ಮತ್ತು ಮರುಸಾರಿ ಕಲಿಸಿದ ಹಿಟ್ಟಿನ ಕಣದಲ್ಲಿ, ಹಿಂದಿನಹುಳಿ ಹಿಟ್ಟನ್ನು ಸೇರಿಸಿದಾಗ, ಅದು ಸಹ ಹುಳಿಯಾಗುತಿತ್ತು, ಈ ರೀತಿಯಾಗಿ ಮುಂದುವರೆಸುವಾಗ, ಆ ಹುಳಿಯು ನೂರಾರು ಸಾವಿರಾರು ರೊಟ್ಟಿಗಳಿಗೆ ಹರಡಿಹೋಗುತ್ತಿತ್ತು.

ಊಹೆಯು ಬೇರೆಯಾಗಿದ್ದರೂ ಸಂದೇಶವು ಸಾಸಿವೆಕಾಳಿನ ಸಾಮ್ಯದ ಅರ್ಥವನ್ನು ನೀಡುತ್ತದೆ: ವಾಕ್ಯದಿಂದ ಉಂಟಾದ ಆಂತರಿಕ ಬಲವು ಬೆಳವಣಿಗೆಯನ್ನು ಅಭಿವೃದ್ಧಿ ಪಡಿಸುತ್ತದೆ.[33] ಸುವಾರ್ತೆಯನ್ನು ಸಾರುವವರಿಗೆ ಇದು ಉತ್ತೇಜನಕರವಾಗಿದೆ. *ಟ್ರುಥ್ ಫಾರ್ ಟುಡೇ* ಯಲ್ಲಿರುವವರಿಗೂ ಉತ್ತೇಜನಕಾರಿಯಾಗಿದೆ.

## ಮರೆಯಾದ ನಿಕ್ಷೇಪ ಹಾಗೂ ಅಮೂಲ್ಯವಾದ ಮುತ್ತಿನ ಸಾಮ್ಯ

## (ಮತ್ತಾಯ 13:44-46)

ಮತ್ತಾಯ 13ರಲ್ಲಿ, ಮಿಕ್ಕಿರುವ ಸಾಮ್ಯಗಳನ್ನು ಯೇಸು ತನ್ನ ಶಿಷ್ಯರಿಗೆ ಖಾಸಗಿಯಾಗಿ ಹೇಳಿರಬಹುದು (ವಚನ 36). ಅವುಗಳಲ್ಲಿ ಮೊದಲಿನ ಎರಡನ್ನು ಜೊತೆಯಾಗಿ ತಿಳಿಸಲ್ಪಟ್ಟಿವೆ: ಬಹಳ ಅಮೂಲ್ಯವಾದ ಸಂಗತಿಯನ್ನು ಇಬ್ಬರು ಮನುಷ್ಯರು ಕಂಡುಕೊಂಡರು. ಒಬ್ಬನು ಮರೆಯಾದ ಒಂದು ನಿಕ್ಷೇಪವನ್ನು ಕಂಡುಕೊಂಡನು (ವಚನ 44), ಎರಡನೆಯವನು, ಅವನು ಬಹುಕಾಲದಿಂದ ಹುಡುಕುತ್ತಿದ್ದ ಒಂದು ಮುತ್ತನ್ನು ಕಂಡುಕೊಂಡನು (ವಚನಗಳು 45, 46).[34] ಈ ಎರಡು ದೃಷ್ಟಾಂತಗಳಲ್ಲೂ, ಅವರು ಬಹು ಅಮೂಲ್ಯವಾದದ್ದನ್ನು ಪಡೆಯಲು, ತಮ್ಮಲ್ಲಿದ್ದ ಎಲ್ಲವನ್ನು ಮಾರಿ ಪಡಕೊಂಡರು. ಇದರಲ್ಲಿ ಅನೇಕ ಪಾಠಗಳು ಅಡಗಿದ್ದರೂ, ಅದರಲ್ಲಿರುವ ಒಂದು ಉದ್ದೇಶವು ಆತನ ಶಿಷ್ಯರಿಗೆ ಪ್ರೋತ್ಸಾಹಕರವಾಗಿತ್ತು.

ಅವರ ತ್ಯಾಗವು ಯೋಗ್ಯವಾದದ್ದೇ ಎಂಬ ಸವಾಲನ್ನು ಅವರು ಹೊಂದಿದರು.

**ಬಲೆಯ ಸಾಮ್ಯ (ಮತ್ತಾಯ 13:47-50)**

ಗಲಿಲಾಯ ಸಮುದ್ರದಲ್ಲಿ, ಬಲೆಯನ್ನು ಉಪಯೋಗಿಸಿ, ಹಿಡಿದ "ಕೆಟ್ಟ" ಮತ್ತು "ಒಳ್ಳೆಯ" ಮೀನುಗಳ ಸಾಮ್ಯದಿಂದ ಈ ಸರಣಿಯು ಅಂತ್ಯವಾಗುತ್ತದೆ: ಒಳ್ಳೆಯ ಮತ್ತ ಕೆಟ್ಟ ಮೀನುಗಳು ಅಂದರೆ, ಒಬ್ಬ ಯೆಹೂದ್ಯನಿಗೆ "ಶುದ್ಧ" ಹಾಗೂ "ಅಶುದ್ಧ" ಎಂಬ ಅರ್ಥವುಂಟಾಗುತ್ತದೆ. ನಿಯಮದ ಪ್ರಕಾರ ರೆಕ್ಕೆ ಹಾಗೂ ಪೊರೆಗಳುಳ್ಳ ಮೀನುಗಳನ್ನು ಮಾತ್ರ ಅವರು ತಿನ್ನಬಹುದಿತ್ತು (ಯಾಜಕಕಾಂಡ 11:9-12). ಬಲೆಯಲ್ಲಿ ಸಕಲ ವಿಧವಾದ ಮೀನು ಗಳು ಇರುವದರಿಂದ, ಅದರಲ್ಲಿ ತಿನ್ನಬಹುದಾದ ಹಾಗೂ ತಿನ್ನಲಾಗದವುಗಳನ್ನು ಮೀನುಗಾರರು ಪ್ರತ್ಯೇಕ ಮಾಡುತ್ತಿದ್ದರು. ಈ ಸಾಮ್ಯವನ್ನು ಯೇಸು, ಅಂತಿಮವಾದ ನ್ಯಾಯತೀರ್ಪಿಗೆ ಹೋಲಿಸಿದ್ದಾನೆ. ಇದು ಸಹ ಹಣಜಿಯು ಸಾಮ್ಯದಂತಿದೆ. ಇದರಲ್ಲಿ ಶಿಷ್ಯರು ಹೆಚ್ಚಿನ ಪಾಠವನ್ನು ಕಲಿತಿರಬಹುದು. "ನಾನು ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುವೆನು" (ಮತ್ತಾಯ 4:19) ಎಂದು ತಿಳಿಸಿದ್ದನು. ಅವರ ಬಲೆಯಲ್ಲಿ ಇಂಥಹ ಸಂಗತಿಗಳು ಸಂಭವಿಸಬಹುದು ಎಂದು ಯೇಸು ಅವರಿಗೆ ತಿಳಿಸಿರಬಹುದು.

## ಮುಕ್ತಾಯ

ಆ ದಿನದಲ್ಲಿ ಯೇಸು ದೀಪಸ್ಥಂಭ (ಮತ್ತಾಯ 4:21, 22; ಲೂಕ 8:16, 17) ಹಾಗೂ ಒಬ್ಬ ಮನುಷ್ಯನು ತನ್ನ ಬೊಕ್ಕಸದಿಂದ ಹಳೆಯ ಹಾಗೂ ಹೊಸ ವಸ್ತುಗಳನ್ನು ಹೊರಗೆ ತರುವ (ಮತ್ತಾಯ 13:52). ಎರಡು ಸಾಮ್ಯಗಳನ್ನು ಏಂಗಡನೆ ಮಾಡಿ ಹೇಳಿರಬಹುದು. ಹೇಗೂ ನಾವು ಈ ಪಾಠಗಳನ್ನು ಅಂತ್ಯಗೊಳಿಸಬೇಕು. ಮುಂದಿನ ಪಾಠದಲ್ಲಿ ಯೇಸುವಿನ ಗಲಿಲಾಯದ ಪ್ರಯಾಣದ "ಕಾರ್ಯ ನಿರತ" ದಿನದ ಬಗ್ಗೆ ಮುಂದುವರೆಸೋಣ.

ಸಾಮ್ಯಗಳನ್ನು ತಿಳಿಸಿದ ಮೇಲೆ ಯೇಸು ತನ್ನ ಶಿಷ್ಯರಿಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದನು. ಅವರು ನೀಡಿದ ಉತ್ತರದಿಂದ ನಾನು ಆನಂದಿಸುತ್ತೇನೆ. "ನೀವು ಈ ಸಂಗತಿಗಳನ್ನು ಅರ್ಥಮಾಡಿಕೊಂಡಿರುವಿರಾ?" ಎಂದಾಗ ಅವರು "ಹೌದು" ಎಂದರು (ಮತ್ತಾಯ 13:51). ಭಾಗವಾಗಿ ಅವರು ಅರ್ಥಮಾಡಿಕೊಂಡಿದ್ದರೂ, ಅವರಲ್ಲಿ ಹೆಚ್ಚು ಜ್ಞಾನಿಗಳಾಗಿರಲಿಲ್ಲ ಎಂಬುದರಲ್ಲಿ ಸಂಶಯವಿಲ್ಲ. ಈ ಸರಣಿಯಿಂದ ನಾವುಗಳು ಲಾಭವನ್ನು ಪಡೆಯಬಹುದಾಗಿದೆ. ಇದರಲ್ಲಿ ದೇವರು ನೀಡಿರುವ ಎರಡು ಸಲಹೆಗಳನ್ನು ಗಮನಿಸಿ: "ನೀವು *ಕಿವಿಗೊಡುವ* ವಿಷಯದಲ್ಲಿ ಎಚ್ಚರಿಕೆ" (ಮಾರ್ಕ 4:24; ಒತ್ತಿ ಹೇಳಿದ್ದು ನನ್ನದು). "*ಕಿವಿಗೊಡವದನ್ನು* ನೋಡಿ ಕೊಳ್ಳಿರಿ" (ಲೂಕ 8:18; ಒತ್ತಿ ಹೇಳಿದ್ದು ನನ್ನದು). ಕಿವಿಯುಳ್ಳವನ್ನು ಕೇಳಲಿ (ಮಾರ್ಕ 4:9; ನೋಡಿ ವಚನ 23).

---

ಟಿಪ್ಪಣಿಗಳು

[1]*ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕ ನೀಡಲಾಗಿದೆ. [2]ಮೂರು ಗುಂಪುಗಳಿವೆ - ಸಕಲ ಸಾಮ್ಯಗಳು. "ಮಹಾ ಗುಂಪು" ಎರಡನೆ ಗುಂಪು ಲೂಕ 15:1-16:31 ಮೂರನೆಯ ಗುಂಪು ಮತ್ತಾಯ 21:23-22:14, ಮಾರ್ಕ ಹಾಗೂ ಲೂಕದಲ್ಲಿ ಸಂಬಂಧಪಟ್ಟವುಗಳಿವೆ. [3]ಇಬ್ಬರು ಸಾಲಗಾರರ ಕುರಿತು ಸಾಮ್ಯವಲ್ಲದಿದ್ದರೂ, ಅವುಗಳನ್ನು "ಸಾಮ್ಯ"ವೆಂದು ಒಪ್ಪಲಾಗಿದೆ. [4]ಇತರೆ "ಸಾಮ್ಯಗಳು" ಮತ್ತಾಯ 11:16-19. [5]ಗಲಿಲಾಯದ ಬಳಿ, "ಆತನು ಸಾಮ್ಯವಿಲ್ಲದೆ ಮಾತಾಡಲಿಲ್ಲ ಎಂಬ ವ್ಯಾಖ್ಯಾ ಸಾಮ್ಯದ ಹೊರತಾಗಿಯೂ ಯೇಸು ಜನರಿಗೆ ಬೋಧಿಸಿದನು," ಆದರೆ ಅಂದಿನಿಂದ ಸಾಮ್ಯಗಳು, ಆತನ ಸೇವೆಯಲ್ಲಿ ಪ್ರಮುಖ ಪಾತ್ರ ವಹಿಸಿದವು. [6](ಮತ್ತಾಯ 13:35)ರಲ್ಲಿ ಕೀರ್ತನೆ 78:2ನ್ನು ಬಳಸಲಾಗಿದೆ.

[7]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 338. [8]F. LaGard Smith, *The Narrated Bible in Chronological Order* (Eugene, Oreg.: Harvest House Publishers, 1984), 1394. [9]H. I. Hester, *The Heart of the New Testament* (Liberty, Mo.: Quality Press, 1963), 147. Hester quoted William Sanday (1843–1920), an English preacher, author, and professor at Cambridge. [10]ಗ್ರಂಥ ಅಧ್ಯಯನವನ್ನು "ಹರ್ಮೆನೆಟಿಕ್ಸ್" ಎಂದು ಕರೆವರು.

[11]ನಡೆದು ಹೋದ ಹಿಂದಿನ ಘಟನೆ "ಅದರಂತೆ" ಪದ ಬಳಕೆ ಇರುವದಿಲ್ಲ. [12]"ಸಾಮ್ಯಗಳನ್ನು" ಹೊಸ ಒಡಂಬಡಿಕೆಯಲ್ಲಿ ಬಳಸಿರುವದರಿಂದ, ಒಪ್ಪಿಕೊಳ್ಳುವ ಎರಡು ಸಾಮ್ಯಗಳನ್ನು ಗಮನಿಸಲಾಗದು. [13]ಇಂಗ್ಲಿಷ್‌ನಲ್ಲಿ "ಜ್ಞಾನೋಕ್ತಿ" ಎಂದಿದ್ದರೆ, ಗ್ರೀಕ್ ಭಾಷೆಯಲ್ಲಿ "ದೃಷ್ಟಾತ" ಎಂದಿರುತ್ತದೆ. [14]ಸಮಾಜದಲ್ಲಿ ಕುಟುಂಬಗಳಲ್ಲಿ ದಿನ ನಿತ್ಯ ನಡೆಯಲಾಗುವ ಘಟನೆಗಳನ್ನು ಯೇಸು ಸಾಮ್ಯರೂಪದಲ್ಲಿ ಬಳಸಿದನು. ಸೈತಾನನ ರಾಜ್ಯ (ಲೂಕ 11:24-26) ಅಥವಾ ಮರಣದ ರೂಪ (ಲೂಕ 16:19-31) ಯಾವುದೇ ಸಾಮ್ಯಗಳನ್ನು ಕಟ್ಟು ಕಥೆ ಎಂದು ಪರಿಗಣಿಸಬಾರದು, ಅವೆಲ್ಲವು ಸತ್ಯದ ಮೂಲವಾಗಿದ್ದವು. [15]ಅನೇಕ ಪ್ರಸಂಗಿಗಳು ಈ ವಿಚಾರದಲ್ಲಿ "ಪಾಪ ಪ್ರಜ್ಞೆ" ಹೊಂದಿದ್ದೇವೆ. [16]ಪರಲೋಕ ರಾಜ್ಯದ ಕುರಿತ *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕವನ್ನು ನೋಡಿರಿ. [17]John Franklin Carter, *A Layman's Harmony of the Gospels* (Nashville: Broadman Press, 1961), 89. [18]ಸಾಮ್ಯಗಳ ಸಾಮ್ಯ ಎಂದು ಒಬ್ಬರು ಕರೆದಿರುವರು. [19]KJVಯಲ್ಲಿ "ರಸ್ತೆ ಬದಿ" ಎಂದಿರುತ್ತದೆ (ಲೂಕ 8:5) ನಾನು ಸಹ ಬಳಸುವೆನು. [20]ಬಿತ್ತುವವನಿಗಿಂತಲೂ, "ಭೂಮಿ"ಗೆ ಹೆಚ್ಚು ಒತ್ತು ನೀಡಿರುವದರಿಂದ ಅದನ್ನು "ಮಣ್ಣಿನ ಸಾಮ್ಯ" ಎಂದು ಕರೆಯಬಹುದು ಎಂದು ವಿವರಣಕಾರರು ತಿಳಿಸಿರುವರು ಆದರೆ ಯೇಸು "ಬಿತ್ತುವವನ ಸಾಮ್ಯವನ್ನು ಕೇಳಿರಿ" ಎಂದಿರುವನು (ಮತ್ತಾಯ 13:18), ನಾವು ಆ ತಲೆಬರಹವನ್ನೇ ಬಳಸುತ್ತೇವೆ.

[21]ಬಿತ್ತುವವನ ಸಾಮ್ಯದ ಅರ್ಥವು, ಸಾಮ್ಯದ ಹೇಳಿದ ತಕ್ಷಣವೇ ಆರಂಭವಾಗುವದರಿಂದ, ಶಿಷ್ಯರು ಹಾಗೂ ಆತನು ಹೊರಡುವ ಮುನ್ನವೇ ಅದರ ಅರ್ಥವನ್ನು ಜನರು ಗ್ರಹಿಸಿರಬಹುದು. ಕೆಲವು ಸಾಮ್ಯಗಳು ಶಿಷ್ಯರಿಗೆ ಮಾತ್ರ ಸೀಮಿತವಾಗಿದ್ದವು. [22]ಎರಡು ಸಾಮ್ಯಗಳು ಪರಿಪೂರ್ಣ ವಿವರಣೆಗಳನ್ನು ಮಾತ್ರ ಸತ್ಯವೇದವು ತಿಳಿಸುತ್ತದೆ (ಬಿತ್ತುವವನ ಹಾಗೂ ಹಣಜಿಯ ದೃಷ್ಟಾಂತ). ಮಾರ್ಕ 4:34ರಲ್ಲಿ ಯೇಸು ಅವುಗಳ ವಿವರಣೆಯನ್ನು ಖಾಸಗಿಯಾಗಿ ತಿಳಿಸಿದನ್ನು ಎಂದಿರುವನು. [23]"ತನಗೆ ತಾನೇ ಅಭಿವೃದ್ಧಿ ಹೊಂದುವ ಬೀಜ" ಎಂದು ಕೆಲವು ಬಾರಿ ಹೇಳಲಾಗಿದೆ. [24]ಬಿತ್ತುವ ಹಾಗೂ ಸುಗ್ಗಿ ಕಾಲದವರೆಗೆ, ಅನೇಕ ಹೊಲಗಳನ್ನು ಕಿತ್ತುವದಿಲ್ಲ, ಅವುಗಳಿಗೆ ನೀರು ಉಣಿಸಿದರೂ, ಒಂದು ವೇಳೆ ಕಿತ್ತಿದರೆ, ಗಿಡಗಳು ಬೇರು ಸಮೇತ ಹೊರ ಬರುತ್ತವೆ. [25]"ಗೋದಿಯಂತಿರುವ ಹಣಜಿ." [26]ಮೀನು ಹಿಡಿಯುವ ಬಲೆ. [27]McGarvey and Pendleton, 339. [28]Carter, 132. [29]ಅನೇಕ ಜೋಡಿ ಸಾಮ್ಯಗಳಿಗೆ, ಇದು ಸಮಾನವಾಗಿದೆ. [30]ಸಾಸಿವೆ ಕಾಳು, "ಸಕಳ ಕಾಳುಗಳಿಗಿಂತ ಅತಿ ಚಿಕ್ಕದು" ಎಂಬ ವ್ಯಾಖ್ಯಾನವು ಅಂದಿನ ಜಗತ್ತು ಹಾಗೂ ಕಾಲಮಾನಕ್ಕೆ ಅನುಗುಣವಾಗಿತ್ತು. ಈ ಬೀಜವನ್ನು ನಿಮ್ಮ ಕೇಳುಗರಿಗೆ ತೋರಿಸಿರಿ.

[31]ರಾಬರ್ಟ್‌ರವರ ಪ್ರಕಾರ, ಸಾಸಿವೆ ಗಿಡವು, ಕುದುರೆಯ ಮೇಲಿರುವ ಒಬ್ಬ ವ್ಯಕ್ತಿಯ ಎತ್ತರದಷ್ಟಿತ್ತು. [32]ಈಗಿನ ಕಾಲದಲ್ಲಿ ಬ್ರೆಡ್ಡನ್ನು ಪಟ್ಟಣ ಕಟ್ಟುವ ಯಂತ್ರಗಳಿವೆ. [33]ಹೊಸ ಒಡಂಬಡಿಕೆಯಲ್ಲಿ ಹುಳಿಯನ್ನು ತಪ್ಪಾದ ಉದಾಹರಣೆಯಾಗಿ ಬಳಸಲಾಗಿದೆ. ಅದು ಇಷ್ಟ ಪದದ ಪ್ರಭಾವ ಎಂಬ ಅರ್ಥ (ಮತ್ತಾಯ 16:6; 1 ಕೊರಿಂಥ 5:6-8; ಗಲಾತ್ಯ 5:9). ಸಾಸಿವೆ ಕಾಳು, ಹಾಗೂ ಹುಳಿ, ಸೈತಾನನ ಕಾರ್ಯದ ಎಚ್ಚರಿಕೆಯನ್ನು ಶಿಷ್ಯರಿಗೆ ನೀಡಿರಬಹುದು. ಅದರಲ್ಲಿ ಸಕರಾತ್ಮಕ ಸತ್ಯಾಂಶಗಳಿವೆ. [34]ಕೆಲವರು "ಸುವಾರ್ತೆಯೆಂಬ ನಿಕ್ಷೇಪವನ್ನು" ಹೊಂದಿರುವ ಉದಾಹರಣೆಯನ್ನು ನೀಡಿರಿ. ಜನರು ಹುಡುಕದೇ ಇರುವಾಗ ತಮ್ಮ ಸ್ನೇಹಿತರ ಅಥವಾ ಸಹ ಪಾಟಿಗಳ ಮೂಲಕ ಶುಭಸಮಾಚಾರವನ್ನು ಪಡೆಯಬಹುದು.